235 (486) : ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದ ಪಡುವರಿ ಗ್ರಾಮದ ತಡೆಗೋಡೆ ಪ್ರಸ್ತಾವನೆ ಈಗ ಯಾವ ಹಂತದಲ್ಲಿರುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಪಡುವರಿ ಗ್ರಾಮದ ಬಳಿ ತಡೆಗೋಡೆ ನಿರ್ಮಿಸುವ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ರೂ. 3.21 ಕೋಟಿ ಅಂದಾಜಿಗೆ ಮಂಜೂರಾತಿ ದೊರೆತಿರುತ್ತದೆ. ಇದನ್ನು (ಸೆಂಟ್ರಲ್ ವಾಟರ್ ಪವರ್ ರಿಸರ್ಚ್ ಸ್ಟೇಷನ್) ಪುಣೆ ರವರ ವಿನ್ಯಾಸದಂತೆ ಅಂದಾಜು ಪಟ್ಟಿಯನ್ನು ತಯಾರಿಸಿದಾಗ 1170 ಮೀಟರ್ ಉದ್ದದ ಬದಲಾಗಿ 654 ಮೀಟರ್ ಮಾತ್ರ ತಡೆಗೋಡೆ ಸಾಧ್ಯವಾಗುತ್ತದೆ. ಈ ಬಗ್ಗೆ ಅನುಮೋದನೆ ನೀಡಲು ಮತ್ತು ಉಳಿದ 516 ಮೀಟರ್ ಉದ್ದದ ತಡೆಗೋಡೆ ನಿರ್ಮಾಣ ಮಾಡಲು ಬೇಕಾದ ರೂ. 2.54 ಕೋಟಿಯ ಕಾಮಗಾರಿಗೂ ಒಪ್ಪಿಗೆ ನೀಡಿ ಕೇಂದ್ರ ಸರ್ಕಾರದ ಅನುದಾನವನ್ನು ಬಿಡುಗಡೆ ಮಾಡಲು ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಮಂಜೂರಾತಿ ದೊರೆತ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

237 (492) : ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೈಂದೂರು ಕ್ಷೇತ್ರದ ಬಡಾಕೆರೆ ಸೇತುವೆ ನಿರ್ಮಾಣಕ್ಕೆ ಸರ್ಕಾರದಿಂದ ಅನುಮೋದನೆ ದೊರೆತು ಗುದ್ದಲಿ ಪೂಜೆಯೂ ನಡೆದಿದ್ದರೂ ಸಹ ಕಾಮಗಾರಿ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದಿಂದ ಬಿಡುಗಡೆಯಾಗಬೇಕಾದ ಶೇಕಡಾ 10ರ ಅನುದಾನವು ಯಾವಾಗ ಬಿಡುಗಡೆಯಾಗುತ್ತದೆ.

ಇ) ಸದರಿ ಕೆಲಸವು ಎಂದಿನಿಂದ ಪ್ರಾರಂಭವಾಗುತ್ತದೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು.

ಆ) 2004–05ನೇ ಸಾಲಿಗೆ ಬಿಡುಗಡೆಗೊಳಿಸಿದ ರೂ. 101.00 ಲಕ್ಷಗಳ ಅನುದಾನದಲ್ಲಿ ಈ ಕಾಮಗಾರಿಯೂ ಸೇರಿರುತ್ತದೆ.

ಇ) ಕಾರ್ಯ ನಿರ್ವಾಹಕ ಅಭಿಯಂತರರು, ಬಂದರು ಹಾಗೂ ಮೀನುಗಾರಿಕೆ ವಿಭಾಗ, ಉಡುಪಿ ಇವರು ಕಾಮಗಾರಿಗೆ ಟೆಂಡರುಗಳನ್ನು ಕರೆದಿರುತ್ತಾರೆ.

ಈ ಪ್ರಕ್ರಿಯೆ ಮುಗಿದನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

238 (1408) : ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಮಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೈಂದೂರು ಕ್ಷೇತ್ರದ ಕಿರಿಮಂಜೇಶ್ವರ ಗ್ರಾಮದ ಕೋಡೇರಿ ಎಂಬಲ್ಲಿ ಮೀನುಗಾರಿಕಾ ಜಟ್ಟಿ ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಇದ್ದರೆ, ಅದು ಯಾವ ಹಂತದಲ್ಲಿದೆ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು, ಆರ್.ಐ.ಡಿ.ಎಫ್. ಯೋಜನೆಯಲ್ಲಿ ಈ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಆ) ಕೋಡೇರಿಯಲ್ಲಿ ಮೀನುಗಾರಿಕೆ ಜೆಟ್ಟಿ ನಿರ್ಮಾಣದ ಸಂಬಂಧ ನಬಾರ್ಡ್ ಸಂಸ್ಥೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕೆಲವೊಂದು ತಾಂತ್ರಿಕ ಅಂಶಗಳ ಬಗ್ಗೆ ವಿವರಗಳು ಅಗತ್ಯವಾಗಿದ್ದು, ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

239 (875) : ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಸಾರಿಗೆ ಸಂಸ್ಥೆಯ ಡಿಪೋ ಘಟಕಗಳ ಸಂಖ್ಯೆ ಎಷ್ಟು ಹಾಗೂ ಅವು ಎಲ್ಲೆಲ್ಲಿ ಅಸ್ಥಿತ್ವದಲ್ಲಿವೆ;

ಆ) ಸದರಿ ಘಟಕಗಳಲ್ಲಿರುವ ವಾಹನಗಳ ಸಂಖ್ಯೆ ಎಷ್ಟು;

ಇ) ಈ ಡಿಪೋಗಳು ಜೊತೆಗೆ ಹೊಸದಾಗಿ ಡಿಪೋಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರಕ್ಕಿದೆಯೇ;

ಈ) ಶಿವಮೊಗ್ಗ ಜಿಲ್ಲೆಯ ಯಾವ ಯಾವ ಸ್ಥಳಗಳಿಗೆ ಈ ಡಿಪೋಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ;

ಉ) ಇದರಲ್ಲಿ ಸಾಗರ ತಾಲ್ಲೂಕು ಸಹ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಬಂದಿದ್ದಲ್ಲಿ ಅದರ ಕಾಮಗಾರಿ ಪ್ರಗತಿಯಲ್ಲಿದೆಯೇ;

ಋ) ಯಾವಾಗ ಮುಗಿಸಲಾಗುವುದು ಹಾಗೂ ಇದಕ್ಕೆ ಬಿಡುಗಡೆಯಾದ ಮೊತ್ತ ಎಷ್ಟು.

ಋ) ಈಗಾಗಲೇ ಎಷ್ಟು ಖರ್ಚಾಗಿದೆ ಮತ್ತು ಬಾಕಿ ಇರುವ ಮೊತ್ತ ಎಷ್ಟು;

ಎ) ಸಾಗರ ವ್ಯಾಪ್ತಿಯಲ್ಲಿ ಸರಿಯಾದ ಬಸ್ಸಿನ ಸಂಪರ್ಕ ಇಲ್ಲದಿರುವುದು ನಿಜವೇ ಹಾಗೂ ಕೆಲವು ಬಸ್ಸು ಮಾರ್ಗಗಳನ್ನು ರದ್ದುಪಡಿಸಲು ಕಾರಣಗಳೇನು;

ಏ) ಈ ಭಾಗದ ಗ್ರಾಮಾಂತರಕ್ಕೆ ಹೆಚ್ಚುವರಿಯಾಗಿ ಬಸ್‌ಗಳನ್ನು ಬಿಡಲು ಹಾಗೂ ಹೊಸ ಮಾರ್ಗಗಳಲ್ಲಿ ಬಸ್ ಸಂಚಾರ ಸೌಲಭ್ಯ ಕಲ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;

ಐ) ಇಂತಹ ರದ್ದುಪಡಿಸಿರುವ ಮಾರ್ಗಗಳಾವುವು ಹಾಗೂ ರದ್ದುಪಡಿಸಲು ಕಾರಣಗಳೇನು ಇಲ್ಲಿಗೆ ಯಾವ ಬದಲಿ ವ್ಯವಸ್ಥೆ ಮಾಡಲಾಗಿದೆ (ವಿವರಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 1(ಒಂದು) ಶಿವಮೊಗ್ಗದಲ್ಲಿ

ಆ) 129.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.